ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

**ಸಿ. ಸಿ. ನಂ.801/2024**

| | | | | |
|---|---|---|---|---|
| ಸಾಕ್ಷಿಧಾರರ ಹೆಸರು | : ಮಾರ್ಕಂಡಯ್ಯ ಕಲಕೊಪ್ಪ | | ಪಿಡಬ್ಲ್ಯೂ | 03 |
| ತಂದೆ:ಗಂಡನ ಹೆಸರು | : ಬಸಪ್ಪ | | ಸಿಡಬ್ಲ್ಯೂ | 03 |
| ವಯಸ್ಸು | : 60 ವರ್ಷ | | | |
| ಉದ್ಯೋಗ | : ವ್ಯವಸಾಯ | | | |
| ವಾಸಸ್ಥಳ | : ಮಂತಗಿ | | | |

ದಿನಾಂಕ **17.01.2025** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ

ಚಾಸಾ-2, 5 ರವರ ಪರಿಚಯ ಇದೆ. ದಿನಾಂಕ: 10.07.2023 ರಂದು ಬೆಳಿಗ್ಗೆ 10.00 ಗಂಟೆ ಗೆ ಮಂತಗಿಯಿಂದ ಹಾನಗಲ್ ಗೆ ಕೆ ಎಸ್ ಆರ್ ಟಿ ಸಿ ಬಸ್‌ನಲ್ಲಿ ಬರುತ್ತಿದ್ದು, ಹಾನಗಲ್ ಹಳೇ ಬಸ್ ನಿಲ್ದಾಣ ಹತ್ತಿರ ಪಾದಗಟ್ಟಿ ಬಸ್ ನಿಲ್ದಾಣದಲ್ಲಿ ಇಳಿದೆನು. ನಾನು ಇಳಿದು ಹೊರಟಿದ್ದೆ ನನ್ನ ಮುಂ ದೆ ಚಾಸಾ-4 ಹೊರಟಿದ್ದರು. ಬಸ್ ತಾಗಿ ಚಾಸಾ-4 ಕೆಳಗೆ ಬಿದ್ದರು, ಅವರ ಬಲಗಾಲಿನ ಮೇಲೆ ಗಾಲಿ ಹಾಯಿತು. ಸರಕಾರಿ ಆಸ್ಪತ್ರೆಯಲ್ಲಿ ಅವರನ್ನು ಆ್ಯಂಬುಲೆನ್ಸನಲ್ಲಿ ಕಳುಹಿಸಲಾಯಿತು. ಮಾರನೇ ದಿನ ಪ್ರಶಾಂತ ಅವರು ನನ್ನನ್ನು, ಚೌಡಪ್ಪ, ನಾಗರಾಜ ಅವರನ್ನು ಪೋಲಿಸ್ ಠಾಣೆಗೆ ಕರೆದರು, ಅಲ್ಲಿ ಸಹಿ ಮಾಡಿಸಿಕೊಂಡರು. ಪಂಚನಾಮೆಯು ಹಳೇ ಬಸ್ ನಿಲ್ದಾಣ ಹತ್ತಿರ ಆಯಿತು. ಪಂಚನಾಮೆಯು 10.00 ರಿಂದ 11.00 ಗಂಟೆಯವರೆಗೆ ಆಯಿತು. ಆ ಕಾಲಕ್ಕೆ ಪೊಟೋ ತೆಗೆದರು. ಚೌಡಪ್ಪ ಜಾಗ ತೋರಿಸಿದರು. ಸ್ಥಳದಲ್ಲಿ ಕೆ ಎಸ್ ಆರ್ ಟಿ ಸಿ ಬಸ್ ಇತ್ತು. ಬಸ್ ನಂ. ಕೆಎ. 27 ಎಫ್ 509 ಇತ್ತು. ಬಸ್ ನ್ನು ಠಾಣೆಗೆ ಕರೆದುಕೊಂಡು ಹೋದರು. ಬಸ್ ಜಪ್ತಿಯನ್ನು 11.30 ರಿಂದ 12.00 ಗಂಟೆವರೆಗೆ ಮಾಡಿರುತ್ತಾರೆ. ಬಸ್ ಚಾಲಕನ ಹೆಸರನ್ನು ತಿಳಿದುಕೊಳ್ಳಲಿಲ್ಲ. ಆತನನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ಬಸ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಬಸ್ ನ್ನು ಗುರುತಿಸಿದ್ದು ಪೊಟೋವನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಅಪಘಾತ ಸ್ಥಳದ ಪಂಚನಾಮೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. 3 ಪೊಟೋಗಳನ್ನು

ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದೆ. ವಾಹನ ಜಪ್ತಿ ಪಂಚನಾಮೆಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಂ ಕೆ ವಕೀಲರಿಂದಃ</u>

ನಾನು ಚಾಸಾ-1,4 ಎಲ್ಲರೂ ಒಂದೇ ಸಮುದಾಯವರು ಎಂದರೆ ಸರಿಯಲ್ಲ. ಸುಮಾರು 5-6 ಹಳ್ಳಿ ಜನ, ಶಾಲಾ ಮಕ್ಕಳು, ಶಕ್ತಿಯೋಜನೆ ಅಡಿಯಲ್ಲಿ ಮಹಿಳೆಯರು ಹಾನಗಲ್ ಗೆ ಪ್ರತಿಯೊಂದು ಕೆಲಸಕ್ಕೆ ಬೆಳಗಿನ ಬಸ್ ನಲ್ಲಿ ಬರುತ್ತಾರೆ ಎಂದರೆ ಸರಿ. 10 ನೇ ತಾರೀಖಿಗೆ ನಾನು ಮಂತಗಿಯಿಂದ ಹಾನಗಲ್ ಗೆ ಬರುತ್ತಿದ್ದೆ. ನಾನು ಆ ಬಸ್ ನಲ್ಲಿ ಪ್ರಯಾಣಿಸಿದ ಬಗ್ಗೆ ಬಸ್ ಟೀಕೆಟ ಹಾಜರುಪಡಿಸಿಲ್ಲ. ಆ ದಿನ ನಾನು ಆ ಬಸ್ ನಲ್ಲಿ ಪ್ರಯಾಣ ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ನನಗೆ ಬಸ್ ನಲ್ಲಿ ಸೀಟು ಸಿಗಲಿಲ್ಲ. ಆ ದಿನ 140-150 ಜನ ಬಸ್ ನಲ್ಲಿ ಇದ್ದರು ಎಂದರೆ ಸರಿ. ಆ ದಿನ ಬಸ್ ಸಂಪೂರ್ಣ ರಶ್ ಇತ್ತು ಎಂದರೆ ಸರಿ. ಆ ದಿನ ಬಸ್ ನಲ್ಲಿ ಯಾರ ಮುಖವು ಕಾಣದಷ್ಟು ರಶ್ ಇತ್ತು ಎಂದರೆ ಸರಿ.

ಆ ದಿನ ಮಳೆ ಇತ್ತು ಎಂದರೆ ಸರಿ. ಹಾನಗಲ್ ಹಳೇ ಬಸ್ ನಿಲ್ದಾಣ ಪುರಸಭೆ ಎದುರುಗಡೆ ಇದೆ ಎಂದರೆ ಸರಿ. ರಸ್ತೆ ಯ ಎಡಬದಿಗೆ ಗ್ರಾಮದೇವತೆಯ ಪಾದಗಟ್ಟಿ ಇದೆ ಎಂದರೆ ಸರಿ. ರಸ್ತೆಯ ಬಲಬದಿಗೆ ಪುರಸಭೆ ಇದೆ ಎಂದರೆ ಸರಿ. ಸುತ್ತಮುತ್ತ ಅಂಗಡಿಗಳು ಇವೆ ಎಂದರೆ ಸರಿ. ಸ್ಥಳ ಜನದಟ್ಟಣೆಯ ಸ್ಥಳ ಎಂದರೆ ಸರಿ. ಚಾಸಾ-4 ರವರಿಗೆ 60 ವರ್ಷಕ್ಕಿಂತ ಹೆಚ್ಚು ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಅವರು ಅನಾರೋಗ್ಯ ಪೀಡಿತರು ಎಂದರೆ ಸರಿಯಲ್ಲ. ಬಸ್ ರಶ್ ಆಗಿದ್ದರಿಂದ ಹತ್ತುವಾಗ ಮತ್ತು ಇಳಿಯವಾಗ ಗೊಂದಲ ಇರುತ್ತದೆ ಎಂದರೆ ಸರಿ. ಮಳೆಯಾಗಿದ್ದರಿಂದ ಮತ್ತು ವಯೋವೃದ್ಧರಾಗಿದ್ದರಿಂದ ಚಾಸಾ-4 ರವರು ನಿಂತ ಬಸ್ ನಿಂದ ಜಾರಿ ಬಿದ್ದು ಗಾಯಗೊಂಡರು ಎಂದರೆ ಸರಿಯಲ್ಲ. ಜನದಟ್ಟಣೆ ಮತ್ತು ದೂಡಾಟ ಕಾರಣದಿಂದ ಚಾಸಾ-4 ಬಿದ್ದಿರುತ್ತಾರೆ ಹೊರತು ಬಸ್ ಚಾಲಕನ ತಪ್ಪಿನಿಂದ ಅಪಘಾವಾಗಿರುವುದಿಲ್ಲ. ಚಾಸಾ-4 ಬಿಟ್ಟು ಬೇರೆ ಯಾರು ಗಾಯಗೊಂಡಿಲ್ಲ ಎಂದರೆ ಸರಿ.

ನಾನು ಪೋಲಿಸರಿಗೆ ಹೇಳಿಕೆ, ಪಂಚನಾಮೆ ದಿನ ನೀಡಿರುತ್ತೇನೆ. ಘಟನಾ ಸ್ಥಳದ ಚಕಬಂದಿ ಹೇಳಲು ಬರುವುದಿಲ್ಲ. ಓದಲು ಬರುತ್ತದೆ ಬರೆಯಲು ಕಣ್ಣು ಕಾಣುವುದಿಲ್ಲ. ಪೋಲಿಸರು ಬರೆದಿರುವುದನ್ನು ನಾನು ಓದಿಲ್ಲ. ನಾನು ಓದದೇ ಸಹಿ ಮಾಡಿದ್ದೇನೆ ಎಂದರೆ ಸರಿ. ರಸ್ತೆ ಎಷ್ಟು ಅಗಲ ಇದೆ ಅಂತಾ ಹೇಳಲು ಬರುವುದಿಲ್ಲ. ಬಸ್ ನಿಂತ ದಿಕ್ಕನ್ನು ಹೇಳಲು ಬರುವುದಿಲ್ಲ. ಪೋಲಿಸ್ ಠಾಣೆಯಲ್ಲಿ ನಾನು ಸಹಿ ಮಾಡಿರುತ್ತೇನೆ. ಹಳೇ ಬಸ್ ನಿಲ್ದಾಣದಲ್ಲಿ ಸಹಿ ಮಾಡಿ ಪೋಲಿಸ್ ಠಾಣೆಗೆ ಹೋಗಿ ಸಹಿ ಮಾಡಿರುತ್ತೇವೆ. ಆಗ 12.00 ಗಂಟೆಯಾಗಿರಬಹುದು. ನಾನು

ಚಾಸಾ-4 ರವರಿಗೆ ಸಹಾಯವಾಗಲೆಂದು ಖೊಟ್ಟಿ ಪಂಚನಾಮೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ಘಟನೆಗೂ ಆರೋಪಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಸಹಾಯ ವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರವರಿಗೆ ಪರಿಹಾರ ಸಿಗಲು ಖೊಟ್ಟಿ ದಾಖಲೆ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಪಂಚನಾಮೆಗಳು ವಸ್ತು ಸ್ಥಿತಿಗೆ ವಿರುದ್ದವಾಗಿವೆ ಎಂದರೆ ಸರಿಯಲ್ಲ. ಬಸ್ ಹಸಿರು ಬಣ್ಣದ್ದು ಇರುತ್ತದೆ.

**: ಮರುವಿಚಾರಣೆ : ಇಲ್ಲ.**

**(** ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್